# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1464

**ಸದಸ್ಯರ ಹೆಸರು** : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

**ಉತ್ತರಿಸಬೇಕಾದ ದಿನಾಂಕ** : 10-03-2022

**ಉತ್ತರಿಸುವ ಸಚಿವರು** : ಗೃಹ ಸಚಿವರು

| ಕ್ರಸ | ಪ್ರಶ್ನೆ |
|---|---|
| ಅ | ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸ್ವಯಂ ಪ್ರೇರಿತ ಜಾಗರೂಕತೆ ದಳಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಹಾಗಿದ್ದಲ್ಲಿ, ಈ ಪ್ರಕರಣಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು) |
| ಆ | ರಾಜ್ಯದಲ್ಲಿ ಇಂತಹ ಸ್ವಯಂ ಪ್ರೇರಿತ ಜಾಗರೂಕತೆ ದಳ ಮತ್ತು ನೈತಿಕ ಪೋಲೀಸಿಂಗ್ ಗುಂಪುಗಳಿಂದ ಪಶುವಧೆ ಮತ್ತು ಲವ್ ಜಿಹಾದ್ ಹೆಸರಿನಲ್ಲಿ ನಾಗರೀಕರನ್ನು ಹಿಂಸಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು) |
| ಇ | ಇಂತಹ ಪ್ರಕರಣಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಳ್ಳುವಂತೆ ಆದೇಶಿಸಿರುವುದು ನಿಜವೇ? (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) |

**ಉತ್ತರ**

ಬಂದಿದೆ.

ರಾಜ್ಯದಲ್ಲಿ ಇಂತಹ ವ್ಯಕ್ತಿ/ ದಳಗಳಿಂದ ಪಶುವಧೆ ಮತ್ತು ಲವ್ ಜಿಹಾದ್ ಹೆಸರಿನಲ್ಲಿ ನಾಗರೀಕರನ್ನು ಹಿಂಸಿಸುತ್ತಿರುವ ಬಗ್ಗೆ ಕಳೆದ 03 ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳ ಘಟಕವಾರು ವಿವರ ಕೆಳಕಂಡಂತಿದೆ.

| ಕ್ರಸ | ಘಟಕ | ಪಶುವಧೆ | | | | ಲವ್ ಜಿಹಾದ್ | | | |
|---|---|---|---|---|---|---|---|---|---|
| | | 2019 | 2020 | 2021 | 2022 | 2019 | 2020 | 2021 | 2022 |
| 1 | ಮಂಗಳೂರು ನಗರ | 1 | 1 | 1 | 0 | 0 | 0 | 0 | 0 |
| 2 | ಚಿಕ್ಕಮಗಳೂರು | 0 | 0 | 3 | 0 | 1 | 0 | 1 | 0 |
| 3 | ದಕ್ಷಿಣ ಕನ್ನಡ | 0 | 4 | 1 | | 0 | 0 | 0 | 0 |
| 4 | ಹಾಸನ | 1 | 1 | 0 | 0 | 0 | 0 | 0 | 0 |
| 5 | ಉ.ಕ.ಜಿಲ್ಲೆ | 0 | 0 | 2 | 1 | 0 | 0 | 0 | 0 |
| 6 | ಉಡುಪಿ | 0 | 0 | 1 | 0 | 0 | 0 | 1 | 0 |
| | **ಒಟ್ಟು** | **2** | **6** | **8** | **1** | **1** | **0** | **2** | **0** |

- ಇಂತಹ ಪ್ರಕರಣಗಳು ದಾಖಲಿಸಿದ ನಂತರ ಸಂಬಂಧಪಟ್ಟ ವ್ಯಕ್ತಿಗಳನ್ನು ದಸ್ತಗಿರಿ ಮಾಡಿ ಯಾವುದೇ ಅನುಚಿತ ಪ್ರಭಾವಕ್ಕೆ ಮಣಿಯದೇ ಸೂಕ್ತ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
- ಸಾರ್ವಜನಿಕರ ಸುರಕ್ಷತೆಗಾಗಿ ಸ್ಥಾಯಿ ಆದೇಶ 1017 ಹಾಗೂ 1032ರ ರೀತ್ಯಾ ಸಮರ್ಪಕ ಬೀಟ್, ಚೆಕ್ ಪೋಸ್ಟ್, ಹೊಯ್ಸಳ ಬಳಸಿ ನಿಗಾವಹಿಸಲಾಗಿರುತ್ತದೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ರಾಜ್ಯಾದ್ಯಂತ ಮತೀಯವಾಗಿ ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುವ ಕಿಡಿಗೇಡಿಗಳ ವಿರುದ್ಧ ಕಮ್ಯುನಲ್ ಗೂಂಡಾ ಶೀಟ್‌ಗಳನ್ನು ತೆರೆಯಲಾಗುತ್ತಿದೆ.
- ಪೊಲೀಸ್ ಇಲಾಖೆಯ ವತಿಯಿಂದ ಸಾಮಾಜಿಕ ಜಾಲತಾಣಗಳ ಮೇಲೆ ಸಹಾ ನಿಗಾ ಇರಿಸಿ ಅದರಲ್ಲಿ ಪ್ರಚೋದನಾಕಾರಿ ಪೋಸ್ಟ್‌ಗಳನ್ನು ಭಿತ್ತರಿಸುವವರ ಮೇಲೆ ಪ್ರಕರಣವನ್ನು ದಾಖಲಿಸಲಾಗುತ್ತಿದೆ.
- ಮತೀಯ ಅಂಶವುಳ್ಳ ಪ್ರತಿಯೊಂದು ಸಣ್ಣ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಮುದಾಯದ ಮುಖಂಡರನ್ನು ಒಟ್ಟುಗೂಡಿಸಿ ನಾಗರಿಕ ಸಮುದಾಯ ಶಾಂತಿ ಸಭೆಗಳನ್ನು ಪೊಲೀಸ್ ಠಾಣಾ ಮಟ್ಟದಲ್ಲಿ ನಡೆಸಲಾಗುತ್ತಿದೆ.
- ಸಮಾಜದಲ್ಲಿ ಶಾಂತಿ ಕದಡುವ ಕೃತ್ಯ ಎಸಗುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಆರೋಪಿಗಳನ್ನು ದಸ್ತಗಿರಿ ಮಾಡಲಾಗುತ್ತಿದೆ.
- ಕಲಂ: 107 ಸಿಆರ್‌ಪಿಸಿ ರೀತ್ಯಾ ಸದರಿ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ.
- ಸಾರ್ವಜನಿಕ ಸುರಕ್ಷತಾ ಅಧಿನಿಯಮ-2018ರ ಅಡಿಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಸಿ.ಸಿ ಕ್ಯಾಮರಾಗಳ ಅಳವಡಿಸುವುದು ಹಾಗೂ ಮುಂತಾದ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಸಂಖ್ಯೆ:ಹೆಚ್‌ಡಿ 102 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು